ಸರ್ಕಾರಿ ಶಾಲೆಗಳನ್ನು ದತ್ತು ಕೊಡುವ ಯೋಜನೆ

4632 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಸರ್ಕಾರಿ ಶಾಲೆಗಳನ್ನು ದತ್ತು ಕೊಡುವ ಯೋಜನೆಯನ್ನು ಸರ್ಕಾರ ಹೊಂದಿದೆಯೇ? ಹಾಗಿದ್ದಲ್ಲಿ ವಿವರ ನೀಡಿ.*

2) *ಈ ರೀತಿ ಸಂಪೂರ್ಣವಾಗಿ ದತ್ತು ನೀಡುವ ಬದಲು ಶಾಲೆಗೆ ಸಹಾಯ ನೀಡುವ ದಾನಿಗಳನ್ನು ಗುರ್ತಿಸಿ, ಹೆಚ್ಚಿನ ಮೊತ್ತವನ್ನು ನೀಡುವ ದಾನಿಗಳ ಹೆಸರನ್ನು ಆ ಶಾಲೆಗೆ ಇಡುವ ಮೂಲಕ ಅವರಿಂದ ಶಾಲೆಗೆ ಬೇಕಾದ ವಿವಿಧ ರೀತಿಯ ಸೌಲಭ್ಯಗಳನ್ನು ಪಡೆಯಬಹುದಲ್ಲವೆ?*

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

1) ಮತ್ತು 2) ಹೌದು. ಈ ದತ್ತು ಯೋಜನೆಯಲ್ಲಿ ದಾನಿಗಳು ತಮ್ಮ ಇಚ್ಛೆಯಂತೆ ಯಾವುದಾದರೂ ಶಾಲೆಯನ್ನು ದತ್ತು ತೆಗೆದುಕೊಳ್ಳಬಹುದು. ಆ ಶಾಲೆಗೆ ಸಂಬಂಧಿಸಿದಂತೆ ಎರಡು ವರ್ಷಗಳ ಅವಧಿಯ ಕ್ರಿಯಾಯೋಜನೆಯನ್ನು ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಲೀ ಅಥವಾ ಯಾವುದಾದರೂ ಒಂದು ನಿರ್ದಿಷ್ಟ ಅಭಿವೃದ್ಧಿ ಕೆಲಸವನ್ನು ಆರಿಸಿಕೊಳ್ಳಬಹುದು. ಈ ಅವಧಿಯನ್ನು ಪರಸ್ಪರ ಒಡಂಬಡಿಕೆಯಿಂದ ವಿಸ್ತರಿಸಬಹುದು. ಈ ಯೋಜನೆಯ ಒಪ್ಪಿಗೆ ನೀಡುವ ಒಂದು ಮೊಮೊರಾಂಡಮ್ ಆಫ್ ಅಂಡರ್ ಸ್ಟ್ಯಾಂಡಿಗನ್ನು 15.00 ರೂ.ಗಳ ಸ್ಟ್ಯಾಂಪ್ ಪೇಪರ್‌ನಲ್ಲಿ ದತ್ತು ತೆಗೆದುಕೊಳ್ಳುವವರು ಮತ್ತು ಸಂಬಂಧಪಟ್ಟ ಸಾರ್ವಜನಿಕ ಶಿಕ್ಷಣ ಇಲಾಖಾ ಉಪನಿರ್ದೇಶಕರುಗಳು ಸಹಿ ಮಾಡಬೇಕಾಗಿರುತ್ತದೆ. ದಾನಿಗಳು ಶಾಲೆಯ ಕಟ್ಟಡದ ಮೇಲೆ ದತ್ತು ತೆಗೆದುಕೊಂಡಿರುವ ಬಗ್ಗೆ ನಾಮಫಲಕವನ್ನು ಹಾಕಬಹುದು.

ರಾಜ್ಯದಲ್ಲಿ ಮೆದುಳು ಜ್ವರ ಹೆಚ್ಚಾಗಿರುವುದರ ಕುರಿತು

4633 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಇತ್ತೀಚೆಗೆ ಮೆದುಳು ಜ್ವರವು ಹೆಚ್ಚಾಗಿ ಜನರು ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಎಷ್ಟು ಜನರು ಮೆದುಳು ಜ್ವರದಿಂದಾಗಿ ಸಾವನ್ನಪ್ಪಿರುತ್ತಾರೆ? (ಜಿಲ್ಲಾವಾರು ಮಾಹಿತಿ ನೀಡುವುದು)*

ಇ) *ಈ ರೀತಿ ಮೃತಪಟ್ಟಿರುವ ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಿದೆಯೇ? ಏನು ಪರಿಹಾರ ನೀಡಲಾಗಿದೆ?*